1584ಕ್ಕೆ ಉ 182
LKK
01/04/26

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಯತೀಂದ್ರ ಎಸ್ ಇವರು ನಿಯಮ 72ರ ಮೇರೆಗೆ ಮಂಡಿಸಿರುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

**ವಿಷಯ:** ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಶ್ರಯ ಯೋಜನೆ ಬಡಾವಣೆಗಳಲ್ಲಿ ಮತ್ತು ಈ ಹಿಂದೆ ಇದ್ದಂತಹ ಮಂಡಲ ಪಂಚಾಯಿತಿಯಿಂದ ಹಕ್ಕು ಪತ್ರ ನೀಡುವ ಬಡಾವಣೆಗಳಲ್ಲಿ ಹಲವಾರು ಜನರ ಬಳಿ ಹಕ್ಕುಪತ್ರಗಳಿಲ್ಲದೆ ಅಥವಾ ಹಕ್ಕುಪತ್ರ ಕಳೆದು ಹೋಗಿರುವ ಪ್ರಕರಣಗಳಲ್ಲಿ ಹಾಗೂ ಹಕ್ಕುಪತ್ರ ನೀಡಿರುವ ಬಗ್ಗೆ ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ತಾಲ್ಲೂಕು ಕಛೇರಿ ಎಲ್ಲಿಯೂ ಯಾವುದೇ ದಾಖಲೆಗಳಿಲ್ಲದ ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯು ಯಾವುದೇ ಸಕಾರಾತ್ಮಕ ತೀರ್ಮಾನ (ಇ-ಸ್ವತ್ತು ಸೃಜಿಸುವುದು) ಕೈಗೊಳ್ಳುವುದು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಸಾರ್ವಜನಿಕರು ದಿನನಿತ್ಯ ಹಲವಾರು ಕಛೇರಿಗಳಿಗೆ ಅಲೆದು ದಿಕ್ಕು ದೋಚದಂತಾಗಿದೆ. ಆದ್ದರಿಂದ ರಾಜ್ಯಾದ್ಯಾಂತ ಒಂದು ಬಾರಿಗೆ ಅನ್ವಯವಾಗುವಂತೆ ಈ ಹಿಂದೆ ವಿತರಿಸಿ ಕಳೆದು ಹೋಗಿರುವ ಹಕ್ಕುಪತ್ರಗಳ ಆಸ್ತಿಗಳಿಗೆ ಇ-ಸ್ವತ್ತು ಸೃಜಿಸಲು ಗ್ರಾಮ ಪಂಚಾಯಿತಿಗಳಿಗೆ ಅವಕಾಶ ನೀಡುವ ಬಗ್ಗೆ.

***

**ಉತ್ತರ:** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ಅನ್ನು ದಿನಾಂಕ: 07.04.2025 ರಂದು ಅಧಿಸೂಚಿಸಲಾಗಿದ್ದು, ಪ್ರಕರಣ 199 ಕ್ಕೆ ಹೊಸದಾಗಿ ಪ್ರಕರಣ 119ಬಿ ಮತ್ತು 199ಸಿ ಗಳನ್ನು ಅಧಿಸೂಚಿಸಲಾಗಿರುತ್ತದೆ.

ಈ ಅಧಿಸೂಚನೆಯನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ಅನ್ನು ದಿನಾಂಕ: 17.10.2025 ರಂದು ಅಧಿಸೂಚಿಸಲಾಗಿರುತ್ತದೆ.

ಈ ನಿಯಮಗಳನ್ವಯ ಸರ್ಕಾರದ ವಸತಿ ನಿಗಮದ ಯೋಜನೆಯ ಮಂಜೂರಾದ ಆಸ್ತಿಗೆ ಸಂಬಂಧಿಸಿದ ವರ್ಗೀಕರಣದಡಿ ಇ-ಸ್ವತ್ತು ನಮೂನೆಯನ್ನು ಪಡೆಯಲು "ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ / ನಿಗಮದ / ಮಂಡಳಿಯ ಮಂಜೂರಾತಿ ಪತ್ರ" ವನ್ನು ತಂತ್ರಾಂಶದಲ್ಲಿ ಇಂಧೀಕರಿಸುವುದು ಕಡ್ಡಾಯವಾಗಿರುತ್ತದೆ.

ಹಕ್ಕುಪತ್ರಗಳು ಕಳೆದುಹೋಗಿರುವ ಸಂದರ್ಭದಲ್ಲಿ ಹಕ್ಕು ಪತ್ರ ವಿತರಣಾ ಪ್ರಾಧಿಕಾರದಿಂದ ದೃಢೀಕರಣ ಪತ್ರ ಒದಗಿಸಿದಲ್ಲಿ ತಂತ್ರಾಂಶದ ಮೂಲಕ ನಮೂನೆ ವಿತರಣೆಗೆ ಸಂಬಂಧಿಸಿದಂತೆ ಪರಿಶೀಲನೆಯಲ್ಲಿರುತ್ತದೆ.

**ಸಂಖ್ಯೆ:**RDPR 362 GPA 2026.

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.